**Akashvani**
**Bangalore**

**20.04.2024** **19.35 hrs**

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**<><*<><>*><>**

**ಮುಖ್ಯಾಂಶಗಳು**

**೧. ಲೋಕಸಭೆಯ ಮೂರನೇ ಹಂತದ ಚುನಾವಣೆ- ೯೪ ಕ್ಷೇತ್ರಗಳಲ್ಲಿ ಇಂದು ನಡೆದ ನಾಮಪತ್ರ ಪರಿಶೀಲನೆ**

**೨. ಚುನಾವಣಾ ಕಣ; ರಾಜಕೀಯ ಪಕ್ಷಗಳಿಂದ ಅಬ್ಬರದ ಪ್ರಚಾರ-ಮತಯಾಚನೆ; ಕರ್ನಾಟಕದಲ್ಲಿ ಪ್ರಧಾನಮಂತ್ರಿಯವರಿಂದ ರ್‍ಯಾಲಿ- ಸಮಾವೇಶ- ರಾಹುಲ್ ಗಾಂಧಿ ಅವರಿಂದ ಬಿಹಾರದ ಬಾಗಲ್‌ಪುರದಲ್ಲಿ ಚುನಾವಣಾ ರ್‍ಯಾಲಿ**

**೩. ಅಪರಾಧಗಳಿಗೆ ಸಂಬಂಧಿಸಿದ ಹೊಸ ಕಾನೂನು- ಶಾಸನಗಳು, ದೇಶ ಮುನ್ನಡೆಯುತ್ತಿರುವುದರ ಪ್ರತೀಕ- ನ್ಯಾಯಮೂರ್ತಿ ಡಾಕ್ಟರ್ ಡಿ.ವೈ.ಚಂದ್ರಚೂಡ್**

**೪. ಒಲಿಂಪಿಕ್ ಕುಸ್ತಿ ಅರ್ಹತಾ ಪಂದ್ಯ; ಭಾರತದ ನಾಲ್ವರು ಸೆಮಿ ಫೈನಲ್ಸ್‌ಗೆ**

**<><*<><>*><>**

ಲೋಕಸಭೆಯ ಮೂರನೇ ಹಂತದ ಚುನಾವಣೆ ನಿಗದಿಯಾಗಿರುವ ೯೪ ಲೋಕಸಭಾ ಕ್ಷೇತ್ರಗಳಲ್ಲಿಂದು ನಾಮಪತ್ರ ಪರಿಶೀಲನೆ ನಡೆಯಿತು. ನಾಮಪತ್ರಗಳನ್ನು ಹಿಂದಕ್ಕೆ ಪಡೆಯಲು ಸೋಮವಾರ ಕೊನೆಯ ದಿನವಾಗಿದೆ. ಮೂರನೇ ಹಂತದ ಮತದಾನ ಮೇ ೭ ರಂದು ನಡೆಯಲಿದೆ. ಲೋಕಸಭೆಯ ನಾಲ್ಕನೇ ಹಂತದ ಚುನಾವಣೆಗಾಗಿ ನಾಮಪತ್ರಗಳ ಸಲ್ಲಿಕೆ ಪ್ರಕ್ರಿಯೆ ಗುರುವಾರ ಆರಂಭವಾಗಿದೆ. ೯ ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶಗಳಲ್ಲಿರುವ ಒಟ್ಟು ೯೬ ಮತಕ್ಷೇತ್ರಗಳಲ್ಲಿ ಮೇ ೧೩ ರಂದು ಮತದಾನ ನಡೆಯಲಿದೆ.

**<><*<><>*><>**

ಚುನಾವಣೆ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷಗಳು ಅಬ್ಬರದ ಪ್ರಚಾರ ನಡೆಸಿವೆ. ಬಿಜೆಪಿ ಧುರೀಣ ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಬೆಂಗಳೂರಿನಲ್ಲಿಂದು ಚುನಾವಣಾ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿ, ೨೦೪೭ರ ವೇಳೆಗೆ ದೇಶವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿಸಲು ಅವಿರತ ಶ್ರಮಿಸಲು ಬದ್ಧ ಇರುವುದಾಗಿ ತಿಳಿಸಿದರು. ಜನರ ಆಶೋತ್ತರಗಳೆ ತಮ್ಮ ನಿರ್ಣಯಗಳಾಗಿವೆ ಎಂದು ಹೇಳಿದ ಅವರು, ಭಾರತ ಇಂದು ಜಗತ್ತಿನ ಐದನೇ ಅತಿ ದೊಡ್ಡ ಆರ್ಥಿಕತೆ ರಾಷ್ಟ್ರವಾಗಿ ಹೊರಹೊಮ್ಮಿದೆ ಎಂದು ತಿಳಿಸಿದರು.

**ಧ್ವನಿ: ಪ್ರಧಾನಿ**

**<><*<><>*><>**

ಇದಕ್ಕೂ ಮುನ್ನ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಸಾರ್ವಜನಿಕ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿ, ಬಿಜೆಪಿ ಅಭ್ಯರ್ಥಿ ಡಾ.ಕೆ.ಸುಧಾಕರ್ ಹಾಗೂ ಜೆಡಿಎಸ್ ಕೋಲಾರ ಅಭ್ಯರ್ಥಿ ಮಲ್ಲೇಶ್ ಬಾಬು ಪರ ಪ್ರಚಾರ ನಡೆಸಿದರು. ತಮ್ಮ ಪ್ರಗತಿಯ ವರದಿ ಪತ್ರವನ್ನು ಸಲ್ಲಿಸಿ, ಜನರ ಆಶೀರ್ವಾದ ಪಡೆಯಲು ಬಂದಿರುವುದಾಗಿ ತಿಳಿಸಿದ ಪ್ರಧಾನಮಂತ್ರಿ ಅವರು, ವಿವಿಧ ಜನಪರ ಯೋಜನೆ ಹಾಗೂ ಸಾಧನೆಗಳ ಬಗ್ಗೆ ವಿವರಣೆ ನೀಡಿದರು. ಸರ್ಕಾರ ಹಾಕಿಕೊಂಡ ವಿವಿಧ ವಿಧಾಯಕ ಕಾರ್ಯಕ್ರಮಗಳ ಫಲಾನುಭವಿಗಳು ಪರಿಶಿಷ್ಟ ಜಾತಿ, ಬುಡಕಟ್ಟು ಜನಾಂಗ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿದ್ದಾರೆ. ೨೫ ಕೋಟಿಗೂ ಅಧಿಕ ಜನರನ್ನು ಬಡತನ ರೇಖೆಯಿಂದ ಮೇಲಕ್ಕೆ ಎತ್ತಲಾಗಿದೆ. ಹತ್ತು ವರ್ಷಗಳಲ್ಲಿ ದೇಶದಲ್ಲಿ ಹತ್ತು ಕೋಟಿ ಮಹಿಳೆಯರನ್ನು ಸ್ವಸಹಾಯ ಗುಂಪುಗಳಿಗೆ ಸೇರಿಸಲಾಗಿದೆ. ಒಂದು ಕೋಟಿ ಮಹಿಳೆಯರನ್ನು ಲಕ್‌ಪತಿ ದೀದಿಗಳನ್ನಾಗಿ ಮಾಡಲಾಗಿದೆ ಎಂದರು. ಐಎನ್‌ಡಿಐ ಮೈತ್ರಿಕೂಟಕ್ಕೆ ದೂರದೃಷ್ಟಿಯು ಇಲ್ಲ. ನಾಯಕರು ಇಲ್ಲ ಎಂದು ನರೇಂದ್ರ ಮೋದಿ ಟೀಕಿಸಿದರು. ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ನಾಯಕ ದೇವೇಗೌಡ ಮಾತನಾಡಿ, ೨೦೧೮ರಲ್ಲಿ ಅಧಿಕಾರ ಬಿಟ್ಟಾಗ ಕಾಂಗ್ರೆಸ್ ಬೊಕ್ಕಸವನ್ನು ಬರಿದು ಮಾಡಿತ್ತು ಎಂದು ಆಪಾದಿಸಿದರು.

<><*<><>*><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಪರ್ಭಾನಿಯಲ್ಲಿಂದು ಸಾರ್ವಜನಿಕ ರ್‍ಯಾಲಿಯಲ್ಲಿ ಭಾಗವಹಿಸಿದರು. ಎಲ್ಲರೊಂದಿಗೆ ಎಲ್ಲರ ವಿಕಾಸದಡಿ ಎಲ್ಲರನ್ನೂ ಒಳಗೊಂಡ ಅಭಿವೃದ್ಧಿಗೆ ಎನ್‌ಡಿಎ ಬದ್ಧವಾಗಿದೆ ಎಂದು ಹೇಳಿದ ಅವರು, ದೇಶದ ಅಭಿವೃದ್ಧಿಗಾಗಿ ಎನ್‌ಡಿಎ ಮೈತ್ರಿಕೂಟವನ್ನು ಜನ ಬೆಂಬಲಿಸಬೇಕು ಎಂದು ಕೋರಿದರು. ನಾಂದೇಡ್‌ನಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿ, ಅತಿ ಹೆಚ್ಚಿನ ಸಂಖ್ಯೆಯಲ್ಲಿ ಮತದಾನದಲ್ಲಿ ಪಾಲ್ಗೊಳ್ಳಬೇಕು ಎಂದು ಜನರಲ್ಲಿ ಮನವಿ ಮಾಡಿದರು.

<><*<><>*><>

ಮಂಡ್ಯದ ಕೆ.ಆರ್. ನಗರದಲ್ಲಿ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಾಂಗ್ರೆಸ್ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿದರು. ಕೇಂದ್ರ ಸರ್ಕಾರ ಬರ ಪರಿಹಾರ ನೀಡಿಲ್ಲ ಎಂದು ಅವರು ಈ ಸಂದರ್ಭದಲ್ಲಿ ಆರೋಪಿಸಿದರು.

**ಧ್ವನಿ : ಸಿದ್ದರಾಮಯ್ಯ**

<><*<><>*><>

ಕಾಂಗ್ರೆಸ್ ಹಿರಿಯ ನಾಯಕ ರಾಹುಲ್ ಗಾಂಧಿ ಅವರು, ಬಿಹಾರದ ಬಾಗಲ್‌ಪುರದಲ್ಲಿಂದು ಚುನಾವಣಾ ರ್‍ಯಾಲಿ ಉದ್ದೇಶಿಸಿ ಮಾತನಾಡಿ, ಐಎನ್‌ಡಿಐ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ, ಬಡ ಹಾಗೂ ಹಿಂದುಳಿದ ಜನರ ಹಿತಾಸಕ್ತಿ ಕಾಪಾಡಲು ಶ್ರಮಿಸಲಿದೆ ಎಂದು ಹೇಳಿದರು. ಎನ್‌ಡಿಎ ಸರ್ಕಾರ, ಬಡವರ ಹಿತಾಸಕ್ತಿಗಳನ್ನು ಬಲಿಗೊಡುತ್ತಿದೆ ಎಂದು ಆಪಾದಿಸಿದರು. ಅಗ್ನಿ ವೀರ್ ಯೋಜನೆಯನ್ನು ತೆಗೆದು ಹಾಕಲಾಗುವುದು ಹಾಗೂ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಗಾಗಿ ಕಾಯ್ದೆ ತರಲಾಗುವುದು ಎಂದು ರಾಹುಲ್ ಗಾಂಧಿ ಹೇಳಿದರು. ಕತಿಹಾರ್ ಮತ್ತು ಪುರ್ನಿಯಾದಲ್ಲಿ ಆರ್‌ಜೆಡಿ ನಾಯಕ ತೇಜಸ್ವಿ ಪ್ರಸಾದ್ ಯಾದವ್, ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿ, ಮತಯಾಚಿಸಿದರು.

<><*<><>*><>

ರಾಜಕೀಯ ಉದ್ದೇಶಗಳಿಗಾಗಿ ವೈವಿಧ್ಯತೆಯನ್ನು ತೊಡೆದುಹಾಕಲಾಗುತ್ತಿದೆ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ಆಪಾದಿಸಿದ್ದಾರೆ. ಅವರು, ಕೇರಳದ ಚಲಕ್ಕುಡಿ ಮತಕ್ಷೇತ್ರದಲ್ಲಿ ಯುಡಿಎಫ್ ಅಭ್ಯರ್ಥಿ ಪರವಾಗಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿ, ದೇಶದ ವೈವಿಧ್ಯತೆಯನ್ನು ಸಂಸ್ಕೃತಿ, ಧರ್ಮ ಹಾಗೂ ಭಾಷೆ ವಿಚಾರದಲ್ಲಿ ಏಕರೂಪತೆ ತರುವ ಮೂಲಕ ತೊಡೆದುಹಾಕಲು ಯತ್ನಿಸಲಾಗುತ್ತಿದೆ ಎಂದು ಆರೋಪಿಸಿದರು. ದೇಶದ ಜನರ ಆಶೋತ್ತರಗಳನ್ನು ಈಡೇರಿಸಲು ಸಾಂಸ್ಕೃತಿಕ ವೈವಿಧ್ಯತೆಯನ್ನು ಸಂರಕ್ಷಿಸುವ ಜೊತೆಗೆ ಏಕತೆಯನ್ನು ಉಳಿಸುವ ಅವಶ್ಯಕತೆ ಇದೆ ಎಂದರು. ಅನೇಕರನ್ನು ನಿರುದ್ಯೋಗ ಮತ್ತು ಬಡತನಕ್ಕೀಡುಮಾಡಿ, ಕೆಲವು ವ್ಯಕ್ತಿಗಳಿಗೆ ಅನುಕೂಲವಾಗುವಂತೆ ನೀತಿಗಳನ್ನು ರೂಪಿಸಲಾಗಿದೆ ಎಂದು ಹೇಳಿದ ಪ್ರಿಯಾಂಕ ಗಾಂಧಿ, ದೇಶದ ಅಭಿವೃದ್ಧಿ ದರ ಶೇಕಡ ೭.೫ ರಿಂದ ೫.೯ ಕ್ಕೆ ಇಳಿದಿದೆ. ಸಾಲದ ಹೊರೆ ಐವತ್ತೈದು ಲಕ್ಷ ಕೋಟಿ ರೂಪಾಯಿಗಳಿಂದ ಇನ್ನೂರಾ ಐದು ಲಕ್ಷ ಕೋಟಿ ರೂಪಾಯಿಗಳಿಗೆ ಏರಿದೆ ಎಂದರು.

<><*<><>*><>

ಅಪರಾಧಗಳಿಗೆ ಸಂಬಂಧಿಸಿದ ಹೊಸ ಕಾನೂನು- ಶಾಸನಗಳು, ದೇಶವು ಬದಲಾಗುತ್ತಿರುವುದನ್ನು ಮತ್ತು ಮುನ್ನೆಡೆಯುತ್ತಿರುವುದನ್ನು ಸೂಚಿಸುತ್ತದೆ ಎಂದು ಭಾರತದ ವರಿಷ್ಠ ನ್ಯಾಯಾಧೀಶ ನ್ಯಾಯಮೂರ್ತಿ ಡಾಕ್ಟರ್ ಡಿ.ವೈ.ಚಂದ್ರಚೂಡ್ ಹೇಳಿದ್ದಾರೆ. ಅವರು, ದೆಹಲಿಯಲ್ಲಿಂದು ಸಮಾವೇಶವೊಂದರಲ್ಲಿ ಪಾಲ್ಗೊಂಡು ಮಾತನಾಡಿ, ಭಾರತೀಯ ನ್ಯಾಯಸಂಹಿತಾ, ಭಾರತೀಯ ನಾಗರಿಕ ಸುರಕ್ಷಿತಾ ಸಂಹಿತಾ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ- ಈ ಮೂರು ಕ್ರಿಮಿನಲ್ ಕಾಯ್ದೆಗಳ ಮೂಲಕ ದೇಶ ಅಪರಾಧ ನ್ಯಾಯ ವ್ಯವಸ್ಥೆಯಲ್ಲಿ ಗಮನಾರ್ಹ ಸುಧಾರಣೆಗೆ ಸನ್ನದ್ಧವಾಗಿದೆ. ಈ ಕಾಯ್ದೆಗಳು ಅಪರಾಧ ನ್ಯಾಯ ವ್ಯವಸ್ಥೆಯ ಕಾನೂನು ಚೌಕಟ್ಟನ್ನು ನವಯುಗಕ್ಕೆ ರೂಪಾಂತರಿಸಿವೆ. ದೇಶದ ಪ್ರತಿಯೊಬ್ಬರೂ ಈ ಹೊಸ ಕಾನೂನುಗಳನ್ನು ಅಂಗೀಕರಿಸಿದಾಗಲೆ ಅವು ಯಶಸ್ವಿಯಾಗುತ್ತವೆ ಎಂದರು. ಕೃತಕಬುದ್ಧಿಮತ್ತೆಯು ಅಪರಾಧ ವಿಚಾರಣೆಗಳ ಪ್ರಗತಿ ಬಗ್ಗೆ ನಿಗಾ ಇಡಲು ಸಾಧ್ಯ ಮಾಡುತ್ತದೆ. ಪ್ರಕ್ರಿಯೆಗಳಲ್ಲಿರುವ ಲೋಪಗಳನ್ನು ಪತ್ತೆಹಚ್ಚಲು ಕೃತಕಬುದ್ಧಿಮತ್ತೆಯನ್ನು ನಿಯೋಜಿಸಬೇಕಾಗಿದೆ ಎಂದು ನ್ಯಾಯಮೂರ್ತಿ ಡಾಕ್ಟರ್ ಡಿ.ವೈ.ಚಂದ್ರಚೂಡ್ ಹೇಳಿದರು. ಕಾನೂನು ಹಾಗೂ ನ್ಯಾಯ ಖಾತೆ ರಾಜ್ಯ ಸಚಿವ ಅರ್ಜುನ್‌ರಾಮ್ ಮೇಘವಾಲ್ ಮಾತನಾಡಿ, ಹೊಸ ಕ್ರಿಮಿನಲ್ ಕಾಯ್ದೆಗಳ ಶಾಸನವು ಐತಿಹಾಸಿಕ ಕ್ರಮವಾಗಿದೆ. ಇದರಲ್ಲಿ ಆನ್‌ಲೈನ್ ವಿಚಾರಣೆ ಇ-ಫೈಲಿಂಗ್ ನಂತಹ ಅವಕಾಶಗಳು ಇವೆ ಎಂದರು.

<><*<><>*><>

ಈಗ ಮಂಡ್ಯ ಲೋಕಸಭಾ ಕ್ಷೇತ್ರ ದರ್ಶನ: ವರದಿ ಬೆಂಗಳೂರು ಬಾತ್ಮೀದಾರರ ಸುಧೀಂದ್ರ.ಎಚ್.ಆರ್ ಮಂಡ್ಯ ಲೋಕಸಭಾ ಕ್ಷೇತ್ರ ಕರ್ನಾಟಕದ ಹಳೆ ಮೈಸೂರಿನ ಭಾಗದಲ್ಲಿದ್ದು, ವ್ಯಾಪಕವಾಗಿ ಕೃಷಿಕರನ್ನೇ ಹೊಂದಿದೆ. ಕಾವೇರಿ ನೀರನ್ನು ಬಳಸಿ ಕಬ್ಬು ಬೆಳೆಯುವ ರೈತರನ್ನು ಹೊಂದಿರುವ ಮತಕ್ಷೇತ್ರ ಇದಾಗಿದೆ. ಈ ಕ್ಷೇತ್ರದಲ್ಲಿ ಜೆಡಿಎಸ್ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರ್ ಸ್ವಾಮಿ ಹಾಗೂ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಸ್ಟಾರ್ ಚಂದ್ರು ಎಂದೇ ಕರೆಯಲ್ಪಡುವ ವೆಂಕಟರಮಣೇಗೌಡ ನಡುವೆ ನಿಕಟ ಸ್ಪರ್ಧೆ ಏರ್ಪಟ್ಟಿದೆ. ೨೦೧೯ರ ಲೋಕಸಭಾ ಚುನಾವಣೆಯಲ್ಲಿ ಕುಮಾರಸ್ವಾಮಿ ಅವರ ಮಗ ನಿಖಿಲ್ ಕುಮಾರ ಸ್ವಾಮಿ ಅವರು, ಕಾಂಗ್ರೆಸ್ ಬೆಂಬಲದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ನಂತರ ಚುನಾವಣೆಯಲ್ಲಿ ಪರಾಭವಗೊಂಡಿದ್ದರು. ಪ್ರಸ್ತುತ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿರುವ ಕುಮಾರಸ್ವಾಮಿ ಅವರು, ಕಾಂಗ್ರೆಸ್ ವಿರುದ್ಧ ಸೆಣಸುತ್ತಿದ್ದಾರೆ. ೨೦೧೯ರ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿದ್ದ ಸುಮಲತಾ ಅಂಬರೀಶ್ ಅವರು, ಬಿಜೆಪಿ ಬೆಂಬಲದಿಂದ

ಜಯ ಸಾಧಿಸಿದ್ದರು. ಅವರು, ಮತದಾನವಾದ ಒಟ್ಟು ಪ್ರಮಾಣದಲ್ಲಿ ಶೇಕಡ ೫೧ ರಷ್ಟನ್ನು ಪಡೆದು, ೧ ಲಕ್ಷ ೨೫ ಸಾವಿರ ೮೭೬ ಮತಗಳ ಅಂತರದಿಂದ ಗೆಲವು ದಾಖಲಿಸಿದ್ದರು. ಸುಮಲತಾ ಅವರು, ಈ ಬಾರಿ ಸ್ಪರ್ಧಿಸುತ್ತಿಲ್ಲ ಹಾಗೂ ಅವರು ಈಗ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಖ್ಯಾತ ಕನ್ನಡ ಸಿನಿಮಾ ನಟ ದಿವಂಗತ ಅಂಬರೀಶ್ ಹಾಗೂ ಅವರ ಪತ್ನಿ ಸುಮಲತಾ ಅಂಬರೀಶ್ ಸೇರಿದಂತೆ ಚಿತ್ರತಾರೆಯರನ್ನು ಬೆಂಬಲಿಸಿದ ಇತಿಹಾಸ ಮಂಡ್ಯ ಮತಕ್ಷೇತ್ರಕ್ಕಿದೆ. ಹೀಗಾಗಿ ಈ ಕ್ಷೇತ್ರದಲ್ಲಿ ಪ್ರಚಾರಕ್ಕಾಗಿ ರಾಜಕೀಯ ಪಕ್ಷಗಳು ಸಿನಿಮಾ ತಾರೆಯನ್ನು ಬಳಸಿಕೊಳ್ಳುತ್ತಿವೆ. ಸಾಂಪ್ರದಾಯಿಕವಾಗಿ ಮಂಡ್ಯ ಜಿಲ್ಲೆಯ ರಾಜಕೀಯ ಕಾಂಗ್ರೆಸ್, ಹಾಗೂ ಜೆಡಿಎಸ್ ನಡುವೆ ನಡೆದಿದೆ. ಈ ಲೋಕಸಭಾ ಕ್ಷೇತ್ರ ೮ ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದ್ದು, ೬ರಲ್ಲಿ ಕಾಂಗ್ರೆಸ್, ೧ ರಲ್ಲಿ ಜೆಡಿಎಸ್ ಹಾಗೂ ಮತ್ತೊಂದರಲ್ಲಿ ಕಾಂಗ್ರೆಸ್ ಬೆಂಬಲಿತ ಸರ್ವೋದಯ ಕರ್ನಾಟಕ ಪಕ್ಷದ ಶಾಸಕರನ್ನು ಹೊಂದಿದೆ. ಮಂಡ್ಯ ಕ್ಷೇತ್ರದಲ್ಲಿ ೧೭ ಲಕ್ಷ ೭೯ ಸಾವಿರಕ್ಕೂ ಅಧಿಕ ಮತದಾರರಿದ್ದಾರೆ. ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷದ ಅಭ್ಯರ್ಥಿಗಳಲ್ಲದೇ, ಇತರ ೧೪ ಉಮೇದುವಾರರು ಕಣದಲ್ಲಿದ್ದಾರೆ. ಅವರಲ್ಲಿ ನಾಲ್ವರು ನೊಂದಾಯಿತ ಮನ್ನಣೆಯಾಗದಿರುವ ಪಕ್ಷಕ್ಕೆ ಸೇರಿದವರಾಗಿದ್ದು, ೭ ಮಂದಿ ಪಕ್ಷೇತರರು ಇದ್ದಾರೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ.

<><*<><>*><>

ಭಾರತದ ವಿನೇಶ್ ಪೋಗಟ್, ಅನ್ಶು ಮಲಿಕ್, ರೀತಿಕಾ ಹಾಗೂ ಮಾನಸಿ ಏಷ್ಯನ್ ಒಲಿಂಪಿಕ್ ಕುಸ್ತಿ ಅರ್ಹತಾ ಪಂದ್ಯದ ಸೆಮಿ ಫೈನಲ್ಸ್ ಪ್ರವೇಶಿಸಿದ್ದಾರೆ. ಕಿರ್ಗಿಸ್ತಾನದ ಬಿಷ್ಕೆಕ್‌ನಲ್ಲಿಂದು ನಡೆದ ಪಂದ್ಯದಲ್ಲಿ ವಿನೇಶ್ ಕಾಂಬೋಡಿಯಾದ ಸ್ಮನಾಂಗ್ ದಿತ್ ಅವರನ್ನು ಪರಾಭವಗೊಳಿಸಿದರೆ, ೨೦೨೧ರ ವಿಶ್ವ ಚಾಂಪಿಯನ್‌ಶಿಪ್‌ನ ರಜತ ಪದಕ ವಿಜೇತೆ ಅನ್ಶು ಮಲಿಕ್, ಕಿರ್ಗಿಸ್ತಾನದ ಕಲ್ಮಿರಾ ಬಿಲಿಮ್‌ಬೇಕೊವ ಅವರನ್ನು ತಾಂತ್ರಿಕ ಅಂಶಗಳ ಹಿನ್ನೆಲೆಯಲ್ಲಿ ಸೋಲಿಸಿದರು. ಭಾರತದ ರೀತಿಕಾ, ಚೀನಾದ ಜ್ಯಾಂಗ್ ವಾಂಗ್ ಅವರನ್ನು ಹಾಗೂ ಮಾನಸಿ ಅವರು, ಕಜಕಿಸ್ತಾನದ ಇರಿನಾ ಕುರ್ಚ್ಕಿಟೊವ ಅವರನ್ನು ಪರಾಭವಗೊಳಿಸಿದರು.

<><*<><>*><>

ನೌಕರರ ಭವಿಷ್ಯ ನಿಧಿ ಸಂಸ್ಥೆಯು, ಫೆಬ್ರವರಿ ತಿಂಗಳಿನಲ್ಲಿ ೧೫ ಲಕ್ಷ ೪೮ ಸಾವಿರ ನಿವ್ವಳ ಸದಸ್ಯರನ್ನು ಸೇರ್ಪಡೆ ಮಾಡಿಕೊಂಡಿದೆ. ಈ ಅವಧಿಯಲ್ಲಿ ೭ ಲಕ್ಷ ೭೮ ಸಾವಿರ ಹೊಸ ಸದಸ್ಯರು ನೊಂದಣಿಯಾಗಿದ್ದಾರೆ ಎಂದು ಸಂಸ್ಥೆಯು ಇಂದು ಬಿಡುಗಡೆ ಮಾಡಿದ ತಾತ್ಕಾಲಿಕ ವೇತನ ಪಟ್ಟಿಯಲ್ಲಿ ತಿಳಿಸಲಾಗಿದೆ.

<><*<><>*><>

ಐಪಿಎಲ್ ಟಿ-೨೦ ಕ್ರಿಕೆಟ್‌ನಲ್ಲಿಂದು ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ಸನ್ ರೈಸರ್ಸ್ ಹೈದರಾಬಾದ್ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದ್ದು, ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಪಂದ್ಯ ಇದೀಗ ಆರಂಭವಾಗಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಿಗ್ಗೆ ೭.೩೫ ಕ್ಕೆ <>*><>**